## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

**ಉಪಸ್ಥಿತರು**

ಶ್ರೀ. ರಘುರಾಮ.ಎನ್.ಎಸ್., ಬಿ.ಎ., ಎಲ್‌ಎಲ್.ಬಿ.,
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

**ಕ್ರಿಮಿನಲ್ ಮಿಸ್ ಸಂಖ್ಯೆ:*449/2016***

**ದಿನಾಂಕ:*9* ನೇ ಫೆಬ್ರವರಿ *2018***

**ಅರ್ಜಿದಾರರು** : ಶ್ರೀಮತಿ ರುಕ್ಮಿಣಿ ಮಂಜುನಾಥಚಾರಿ, ಗಡೀಹಳ್ಳಿ, ಗಡೀಹಳ್ಳಿ ಅಂಚೆ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(ಪ್ರತಿನಿಧಿಸುವವರು : ಶ್ರೀ. ಡಿ.ಸಿ.ಪರಮೇಶ್ವರಪ್ಪ, ನ್ಯಾಯವಾದಿಗಳು)

**-ವಿರುದ್ಧ-**

**ಎದುರುದಾರರು** :

*1.* ಮಂಜುನಾಥಚಾರಿ ಬಿನ್ ಮುರಹರಚಾರ್,
ನಂ.*109,* ವೈಷ್ಣವಿನಗರ, ಕೆಂಗೇರಿ ಚೆಕ್ ಪೋಸ್ಟ್,
ಬಾಬಾ ಸಾಹೇಬ ಪಾಳ್ಯ, *8* ನೇ ಕ್ರಾಸ್,
ಪಂಚಮುಖಿ ಟೆಂಪಲ್ ಹತ್ತಿರ,
ಬೆಂಗಳೂರು *-60.*

*2.* ರತ್ನಮ್ಮ ಕೋಂ ಮುರಹರಚಾರ್,
ನಂ.*109,* ವೈಷ್ಣವಿನಗರ, ಕೆಂಗೇರಿ ಚೆಕ್ ಪೋಸ್ಟ್,
ಬಾಬಾ ಸಾಹೇಬ ಪಾಳ್ಯ, *8* ನೇ ಕ್ರಾಸ್,
ಪಂಚಮುಖಿ ಟೆಂಪಲ್ ಹತ್ತಿರ,
ಬೆಂಗಳೂರು *-60.*

3. ಸುಶೀಪಮ ಬಿನ್ ಮುರಹರಚಾರ್,
ನಂ.109, ವೈಷ್ಣವಿನಗರ, ಕೆಂಗೇರಿ ಚೆಕ್ ಪೋಸ್ಟ್,
ಬಾಬಾ ಸಾಹೇಬ ಪಾಳ್ಯ, 8ನೇ ಕ್ರಾಸ್,
ಪಂಚಮುಖಿ ಟೆಂಪಲ್ ಹತ್ತಿರ,
ಬೆಂಗಳೂರು -60.

(ಪ್ರತಿನಿಧಿಸುವವರು : ಶ್ರೀಮತಿ ಎಂ.ಸುಶೀಪಮ್ಮ, ನ್ಯಾಯವಾದಿಗಳು)

**ಮಧ್ಯಂತರ ಅರ್ಜಿ ಸಂಖ್ಯೆ:1ರ ಕುರಿತಾದ ಆದೇಶ:-**

ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ:1ನ್ನು ಎದುರುದಾರರು ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸುವ ನಿಯಮ 2006ರ ಕಲಂ 5(2) ರ ಅಡಿಯಲ್ಲಿ ಸಲ್ಲಿಸಿ, ಅರ್ಜಿಗೆ ಪೂರಕವಾಗಿ ನಮೂದಿಸಿರುವ ಪ್ರಮಾಣಪತ್ರದಲ್ಲಿನ ಅಂಶಗಳನ್ನು ಪರಿಗಣಿಸಿ ಅರ್ಜಿದಾರರು ಸಲ್ಲಿಸಿರುವ ಮುಖ್ಯ ಅರ್ಜಿಯು ಮೇಲ್ಕಂಡ ನಿಯಮದ ಪಾಲನೆ ಮಾಡದ ಕಾರಣ ಊರ್ಜಿತವಾಗುವುದಿಲ್ಲವೆಂದು ಆದೇಶಿಸಿ ಸೂಕ್ತ ಆದೇಶವನ್ನು ಮಾಡಿ ಅರ್ಜಿದಾರರು ಸಲ್ಲಿಸಿರುವ ಮುಖ್ಯ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**2. ಎದುರುದಾರರು ಸಲ್ಲಿಸಿರುವ ಮೇಲ್ಕಂಡ ಮಧ್ಯಂತರ ಅರ್ಜಿಗೆ 3ನೇ ಎದುರುದಾರರು ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:-**

ನಾನು ಈ ಪ್ರಕರಣದಲ್ಲಿ 3ನೇ ಎದುರುದಾರಳಾಗಿದ್ದು, ನನಗೆ ಈ ಪ್ರಕರಣದ ವಸ್ತು ವಿಷಯಗಳು ತಿಳಿದಿದೆ. ನಾನು ಈ ಪ್ರಮಾಣಪತ್ರವನ್ನು ನನ್ನ ಪರವಾಗಿ ಮತ್ತು ಇತರೆ ಎದುರುದಾರರ ಪರವಾಗಿ ಸಲ್ಲಿಸಿರುತ್ತೇನೆ. ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸುವ ನಿಯಮ 2006ರ ಕಲಂ 5(2) ರಂತೆ ಸಂರಕ್ಷಣಾ ಅಧಿಕಾರಿಗಳು ದೂರಿನ ಆಧಾರದಲ್ಲಿ ದೌರ್ಜನ್ಯದ ಕುರಿತು ವರದಿಯನ್ನು ತಯಾರಿಸಿ ಸದರಿ

ವರದಿಯನ್ನು ನಮೂನೆ *1*ರಂತೆ ಸಿದ್ದಪಡಿಸಿ ದಂಡಾಧಿಕಾರಿಗೆ ಮತ್ತು ಕೌಟುಂಬಿಕ ದೌರ್ಜನ್ಯ ಏರ್ಪಟ್ಟ ಸ್ಥಳದ ಸಂಬಂಧಪಟ್ಟ ಪೊಲೀಸಠಾಣಾಧಿಕಾರಿಗೆ ನೀಡತಕ್ಕದ್ದು ಎಂದು ಉಲ್ಲೇಖಿಸಿರುತ್ತದೆ. ಆದರೆ ಈ ಪ್ರಕರಣದಲ್ಲಿ ನಮೂನೆ *1*ನ್ನು ಸಂಬಂಧಿಸಿದ ಪೊಲೀಸಠಾಣಾಧಿಕಾರಿಗೆ ವರ್ಗಾಯಿಸಿರುವುದಿಲ್ಲ ಮತ್ತು ದೂರುದಾರರ ಕೌಟುಂಬಿಕ ದೌರ್ಜನ್ಯದ ಕುರಿತು ಯಾವುದೇ ವಿಚಾರಣೆಯನ್ನು ಕೂಡ ಮಾಡಿರುವುದಿಲ್ಲ. ದೂರುದಾರರು ಹೇಳುವಂತೆ ಆಕೆಯು ತನ್ನ ವೈವಾಹಿಕ ಕುಟುಂಬದ ಬೆಂಗಳೂರಿನಲ್ಲಿ ನೆಲೆಸಿರುತ್ತಾರೆ. ಹಾಗಾಗಿ ಅರ್ಜಿದಾರರು ಹೇಳುವಂತೆ ಯಾವುದೇ ಕೌಟುಂಬಿಕ ದೌರ್ಜನ್ಯ ಏರ್ಪಟ್ಟಿರುವುದಿಲ್ಲ. ಅರ್ಜಿದಾರರು ಈ ನ್ಯಾಯಾಲಯದಲ್ಲಿ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ. ಅಲ್ಲದೇ ನ್ಯಾಯಾಲಯಕ್ಕೆ ಸಲ್ಲಿಸಿರುವ ನಿಗದಿತ ನಮೂನೆಯ ವರದಿ ಕೂಡ ಪರಿಪೂರ್ಣವಾಗಿರುವುದಿಲ್ಲ.

*3.* ಆದ್ದರಿಂದ ಮಾನ್ಯ ನ್ಯಾಯಾಲಯವು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಹಾಗೂ ವ್ಯಾಜ್ಯಗಳ ಬಾಹುಳ್ಯತೆಯನ್ನು ತಡೆಯುವ ಸಲುವಾಗಿ ಈ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ. ಈ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ನಮಗೆ ತುಂಬಲಾರದ ಹಾನಿಯುಂಟಾಗುತ್ತದೆ. ಒಂದೊಮ್ಮೆ ಈ ಅರ್ಜಿಯನ್ನು ಪುರಸ್ಕರಿಸಿದಲ್ಲಿ ಎದುರು ಪಕ್ಷಗಾರರಿಗೆ ಯಾವುದೇ ಹಾನಿಯುಂಟಾಗುವುದಿಲ್ಲ. ಆದ್ದರಿಂದ ಎದುರುದಾರರು ಸಲ್ಲಿಸಿರುವ ಈ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

*4.* **ಎದುರುದಾರರು ಸಲ್ಲಿಸಿರುವ ಮೇಲ್ಕಂಡ ಮಧ್ಯಂತರ ಅರ್ಜಿಗೆ ಅರ್ಜಿದಾರರ ಪರ ವಕೀಲರು ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:-**

ಎದುರುದಾರರು ಸಲ್ಲಿಸಿರುವ ಅರ್ಜಿಯು ಕಾನೂನಿನ ಅಡಿಯಲ್ಲಾಗಲೀ, ವಾಸ್ತವೀಕತೆಯ ಅಡಿಯಲ್ಲಾಗಲೀ ಊರ್ಜಿತವಾಗುವುದಿಲ್ಲ. ಎದುರುದಾರರು ತಮ್ಮ

ಅರ್ಜಿಗೆ ಪೂರಕವಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ಅಂಶಗಳು ಸಂಪೂರ್ಣ ಸುಳ್ಳಿನಿಂದ ಕೂಡಿದ್ದು, ಸದರಿ ಅಂಶಗಳನ್ನು ಅರ್ಜಿದಾರರು ಸ್ಪಷ್ಟವಾಗಿ ನಿರಾಕರಿಸಿರುತ್ತಾರೆ ಹಾಗೂ ಪ್ರಮಾಣಪತ್ರದಲ್ಲಿನ ಅಂಶಗಳನ್ನು ಎದುರುದಾರರೇ ರುಜುವಾತುಪಡಿಸತಕ್ಕದ್ದು. ಪ್ರಸ್ತುತ ಈ ಪ್ರಕರಣವನ್ನು ಈ ದಿನದಂದು ಪಿಡಬ್ಲ್ಯೂ.1 ರವರ ಪಾಟೀ ಸವಾಲಿಗಾಗಿ ನಿಗದಿಪಡಿಸಲಾಗಿರುತ್ತದೆ. ಎದುರುದಾರರು ಪಿಡಬ್ಲ್ಯೂ.1 ರವರನ್ನು ಪಾಟೀ ಸವಾಲು ಮಾಡಲು ಸಿದ್ದರಿರುವುದಿಲ್ಲ ಬದಲಾಗಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಪ್ರಕರಣವನ್ನು ಮುಂದಕ್ಕೆ ತಳ್ಳುವ ಸಲುವಾಗಿ ಈ ಅರ್ಜಿಯನ್ನು ಸಲ್ಲಿಸಿದ್ದು, ಇದರಿಂದ ಅರ್ಜಿದಾರರಿಗೆ ತೊಂದರೆ ನೀಡುವ ಉದ್ದೇಶವನ್ನು ಹೊಂದಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಯಾವುದೇ ಹಂತದಲ್ಲೂ ಕೂಡ ಊರ್ಜಿವಾಗತಕ್ಕದ್ದಲ್ಲ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಎದುರುದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

5. **ಮೇಲ್ಕಂಡ ಸಂಗತಿಗಳನ್ನು ಪರಿಗಣಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಆವಗಾಹನೆಗೆ ಬರುತ್ತವೆ:-**

1. **ಎದುರುದಾರರು ಮದ್ಯಂತರ ಅರ್ಜಿ ಸಂಖ್ಯೆ:1 ರಲ್ಲಿ ಕೋರಿರುವಂತೆ ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸುವ ನಿಯಮ 2006 ರ ಕಲಂ 5(2)ರ ಅಡಿಯಲ್ಲಿನ ನಿಯಮಗಳನ್ನು ಪಾಲನೆ ಮಾಡದ ಕಾರಣ ಅರ್ಜಿದಾರರ ಮುಖ್ಯ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರೇ?**

2. **ಹಾಗಿದ್ದಲ್ಲಿ ಯಾವ ಆದೇಶ?**

6. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

*7.* ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಕಂಡಂತೆ ಇದೆಃ-

ಅಂಶ *1* ಃ ನಕಾರಾತ್ಮಕವಾಗಿ
ಅಂಶ *2* ಃ ಅಂತಿಮ ಆದೇಶದಂತೆ

## ಕಾ ರ ಣ ಗ ಳು

*8.* **ಅಂಶ *1*ಃ-** ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆಃ*1* ನ್ನು ಎದುರುದಾರರು ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸುವ ನಿಯಮ *2006* ರ ಕಲಂ *5(2)* ರ ಅಡಿಯಲ್ಲಿ ಸಲ್ಲಿಸಿ, ಅರ್ಜಿಗೆ ಪೂರಕವಾಗಿ ನಮೂದಿಸಿರುವ ಪ್ರಮಾಣಪತ್ರದಲ್ಲಿನ ಅಂಶಗಳನ್ನು ಪರಿಗಣಿಸಿ ಅರ್ಜಿದಾರರು ಸಲ್ಲಿಸಿರುವ ಮುಖ್ಯ ಅರ್ಜಿಯು ಮೇಲ್ಕಂಡ ನಿಯಮದ ಪಾಲನೆ ಮಾಡದ ಕಾರಣ ಊರ್ಜಿತವಾಗುವುದಿಲ್ಲವೆಂದು ಆದೇಶಿಸಿ ಸೂಕ್ತ ಆದೇಶವನ್ನು ಮಾಡಿ ಅರ್ಜಿದಾರರು ಸಲ್ಲಿಸಿರುವ ಮುಖ್ಯ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

*9.* ಪ್ರಸ್ತುತ ಅರ್ಜಿದಾರರು ಈ ಪ್ರಕರಣವನ್ನು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಕಲಂ *12* ರ ಅಡಿಯಲ್ಲಿ ಅರ್ಜಿದಾರಳ ಪತಿ, ಅತ್ತೆ, ನಾದಿನಿಯ ವಿರುದ್ದ ಜೀವನಾಂಶ, ವಾಸದ ಮನೆ, ರಕ್ಷಣಾತ್ಮಕ ಪರಿಹಾರ ಮತ್ತು ಇತರೆ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ.

*10.* ಅರ್ಜಿದಾರರು ಶಿಶು ಅಭಿವೃದ್ದಿ ಅಧಿಕಾರಿಗಳು ತರೀಕೆರೆಯವರಿಗೆ ನೀಡಿರುವ ದೂರಿನ ಆಧಾರದಲ್ಲಿ ಶಿಶು ಅಭಿವೃದ್ದಿ ಅಧಿಕಾರಿ ತರೀಕೆರೆಯವರು ನ್ಯಾಯಾಲಯಕ್ಕೆ ದಿಃ*02-09-2016* ರಂದು ನಮೂನೆ *1* ನ್ನು ಸಲ್ಲಿಸಿರುತ್ತಾರೆ. ಸದರಿ ದೂರನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯವು ಸಿ.ಮಿಸ್.*449/2016* ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಎದುರುದಾರರಿಗೆ ನೋಟೀಸನ್ನು ಜಾರಿ ಮಾಡಿರುತ್ತಾರೆ. ಎದುರುದಾರರು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸಿರುತ್ತಾರೆ.

*11.* ನಂತರದಲ್ಲಿ ಪ್ರಕರಣವನ್ನು ಅರ್ಜಿದಾರರ ಪರ ಸಾಕ್ಷ್ಯಕ್ಕಾಗಿ ನಿಗದಿಪಡಿಸಿದ್ದು, ಅರ್ಜಿದಾರರು ತನ್ನನ್ನು ತಾನು ಪಿಡಬ್ಲ್ಯೂ.*1* ಎಂದು ಸಾಕ್ಷಿ ವಿಚಾರಣೆ ಮಾಡಿದ್ದು, ನಿಪಿ.*1* ರಿಂದ ನಿಪಿ.*26* ರವರೆಗೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ. ಪ್ರಕರಣವನ್ನು ಪಿಡಬ್ಲ್ಯೂ.*1* ರವರ ಪಾಟೀ ಸವಾಲಿಗಾಗಿ ನಿಗದಿಪಡಿಸಿದ್ದು, ಈ ಹಂತದಲ್ಲಿ ಪ್ರಸ್ತುತ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

*12.* ಯಾವುದೇ ಒಂದು ಬಾದಿತ ವ್ಯಕ್ತಿಯು ಸಂರಕ್ಷಣಾಧಿಕಾರಿಗಳ ಸಮಕ್ಷಮ ಅಥವಾ ನೇರವಾಗಿ ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸಬಹುದು ಎಂದು ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸುವ ಅಧಿನಿಯಮ *2005* ರ ಕಲಂ *12* ರಲ್ಲಿ ಉಲ್ಲೇಖಿಸಿರುತ್ತದೆ. ಅಂತೆಯೇ ಸದರಿ ಕಲಂನಂತೆ ಯಾವುದೇ ಬಾಧಿತ ವ್ಯಕ್ತಿ ಅಥವಾ ಸಂರಕ್ಷಕಾಧಿಕಾರಿ ಅಥವಾ ಬಾಧಿತ ವ್ಯಕ್ತಿಯ ಪರವಾಗಿ ಯಾವುದೇ ವ್ಯಕ್ತಿ ದಂಡಾಧಿಕಾರಿಯ ಮುಂದೆ ಈ ಕಾಯ್ದೆಯ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಒಂದು ಅಥವಾ ಹೆಚ್ಚಿನ ಪರಿಹಾರವನ್ನು ಕೋರಿಕೊಳ್ಳಬಹುದು ಎಂದು ಉಲ್ಲೇಖಿಸಿರುತ್ತದೆ. ಅಂತೆಯೇ ಸದರಿ ಅರ್ಜಿದಾರರು ಸಲ್ಲಿಸಿದ ಅರ್ಜಿಯ ಕುರಿತಾಗಿ ಆದೇಶ ಹೊರಡಿಸುವ ಪೂರ್ವದಲ್ಲಿ ಸಂರಕ್ಷಕಾಧಿಕಾರಿಯಿಂದ ಅಥವಾ ಸೇವೆ ಒದಗಿಸುವವನಿಂದ ಸ್ವೀಕರಿಸಿದ ಕೌಟುಂಬಿಕ ಘಟನಾ ವರದಿಯನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು ಎಂದು ಉಲ್ಲೇಖಿತವಾಗಿರುತ್ತದೆ.

*13.* ಈ ಮೇಲ್ಕಂಡ ಅಂಶವನ್ನು ಪರಿಶೀಲಿಸಿದಾಗ ಯಾವುದೇ ಒಂದು ಬಾಧಿತ ವ್ಯಕ್ತಿ ಅಥವಾ ಸಂರಕ್ಷಕ ಅಧಿಕಾರಿ ಅಥವಾ ಬಾಧಿತ ವ್ಯಕ್ತಿಯು ಸಂರಕ್ಷಕ ಅಧಿಕಾರಿಯ ಮೂಲಕ ಈ ಕಾಯ್ದೆಯ ಅಡಿಯಲ್ಲಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಎಂದು ಸ್ಪಷ್ಟೀಕರಿಸುತ್ತದೆ.

*14.* **ಎದುರುದಾರರು ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸುವ ನಿಯಮ *2006* ರ ಕಲಂ *5(2)* ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಲಾಗಿ ಕಲಂ *5 (2)* ಈ ಕೆಳಕಂಡಂತೆ ಉಲ್ಲೇಖಿತವಾಗಿದೆ:-**

ಯಾವುದೇ ಬಾಧಿತ ವ್ಯಕ್ತಿಯ ವಿನಂತಿಯ ಮೇರೆಗೆ ಸೇವೆ ಒದಗಿಸುವವ ಕೌಟುಂಬಿಕ ಘಟನಾ ವರದಿಯನ್ನು ನಮೂನೆ *1* ರಲ್ಲಿ ನಮೂದಿಸಿ ಹಾಗೂ ಅದನ್ನು ಮ್ಯಾಜಿಸ್ಟ್ರೇಟರಿಗೆ ಹಾಗೂ ಗೃಹ ಕೃತ್ಯ ಹಿಂಸೆ ನಡೆದಿದೆ ಎನ್ನಲಾದ ಪ್ರದೇಶದ ಅಧಿಕಾರ ವ್ಯಾಪ್ತಿಯ ಸಂರಕ್ಷಕಾಧಿಕಾರಿಗೆ ರವಾನಿಸಬೇಕೆಂದು ಸ್ಪಷ್ಟೀಕರಿಸಿರುತ್ತದೆ.

***15.*** **ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸಮ ಅಧಿನಿಯಮ *2005* ರ ಕಲಂ *2(ಎನ್)* ಪ್ರಕಾರ ಸಂರಕ್ಷಕ ಅಧಿಕಾರಿ ಎಂದರೆ ಕಲಂ *8* ಉಪ ಕಲಂ *1* ರ ಅಡಿಯಲ್ಲಿ ರಾಜ್ಯ ಸರ್ಕಾರವು ನೇಮಿಸಿದ ಒಬ್ಬ ಅಧಿಕಾರಿಯಾಗಿರುತ್ತಾರೆ.**

ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸಮ ಅಧಿನಿಯಮ *2005* ರ ಕಲಂ *8(1)*ರ ಪ್ರಕಾರ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪ್ರತಿಯೊಂದು ಜಿಲ್ಲೆಗೆ ಅವಶ್ಯಕವೆನಿಸಿದಷ್ಟು ಸಂಖ್ಯೆಯ ಸಂರಕ್ಷಕ ಅಧಿಕಾರಿಯನ್ನು ನೇಮಿಸತಕ್ಕದ್ದು ಮತ್ತು ಸಂರಕ್ಷಕ ಅಧಿಕಾರಿ ಈ ಕಾಯ್ದೆ ಅಡಿಯಲ್ಲಿ ಕಾರ್ಯನಿರ್ವಹಿಸುವ ವ್ಯಾಪ್ತಿ ಮತ್ತು ಕರ್ತವ್ಯವನ್ನು ಸೂಚಿಸತಕ್ಕದ್ದು.

*16.* ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ರಾಜ್ಯ ಸರ್ಕಾರವು ಈ ಕಾಯ್ದೆಯ ಉದ್ದೇಶಕ್ಕಾಗಿ ಸಂರಕ್ಷಕ ಅಧಿಕಾರಿಯನ್ನು ನೇಮಿಸುವ ಕುರಿತು ಉಲ್ಲೇಖ ಇರುತ್ತದೆ. ಪ್ರಸ್ತುತ ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಅರ್ಜಿದಾರರ ದೂರಿನ ಆಧಾರದ ಮೇಲೆ ಅರ್ಜಿಯನ್ನು ಸಲ್ಲಿಸಿರುವ ಶಿಶು ಅಭಿವೃದ್ದಿ ಅಧಿಕಾರಿಗಳು ತರೀಕೆರೆಯವರು ತರೀಕೆರೆ ವ್ಯಾಪ್ತಿಗೆ ಕೌಟುಂಬಿಕ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಸಂರಕ್ಷಣಾಧಿಕಾರಿಯಾಗಿ ನೇಮಕಗೊಂಡಿರುವುದು ಕಂಡುಬರುತ್ತದೆ.

*17.* ಈ ಮೇಲ್ಕಂಡ ನಿಯಮವನ್ನು ಪರಿಶೀಲಿಸಲಾಗಿ ಪ್ರಸ್ತುತ ಈ ಪ್ರಕರಣದಲ್ಲಿ ಅರ್ಜಿದಾರರು ದಿ:*23-08-2016* ರಂದು ಸಂರಕ್ಷಣಾಧಿಕಾರಿ ಕೌಟುಂಬಿಕ ದೌರ್ಜನ್ಯ ಕಾಯ್ದೆ ತರೀಕೆರೆಯವರಿಗೆ ದೂರನ್ನು ನೀಡಿರುತ್ತಾರೆ. ಸದರಿ ದೂರನ್ನು ನೀಡುವ ಸಮಯದಲ್ಲಿ ಅರ್ಜಿದಾರರು ಗಡೀಹಳ್ಳಿ ಗ್ರಾಮ ತರೀಕೆರೆ ತಾಲ್ಲೂಕಿನಲ್ಲಿ

ವಾಸಿಸುತ್ತಿದ್ದುದು ಕಂಡುಬರುತ್ತದೆ. ಹಾಗಾಗಿ ಅರ್ಜಿದಾರರ ಅರ್ಜಿಯನ್ನು ಸ್ವೀಕರಿಸಿ ಸಂರಕ್ಷಣಾಧಿಕಾರಿಗಳು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ತರೀಕೆರೆಯವರು ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ತರೀಕೆರೆಯವರಿಗೆ ದಿ:*02-09-2016* ರಂದು ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸುವ ನಿಯಮ *2005*ರ ನಮೂನೆ *1*ರಂತೆ ಅರ್ಜಿಯನ್ನು ಸಲ್ಲಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸುವ ನಿಯಮ *2006*ರ ಕಲಂ *5(2)* ರ ನಿಯಮ ಪಾಲನೆ ಆಗಿಲ್ಲ ಎಂಬ ಎದುರುದಾರರ ಅಂಶವನ್ನು ಪರಿಗಣಿಸಲು ಬರುವುದಿಲ್ಲವೆಂದು ಮಾನ್ಯ ನ್ಯಾಯಾಲಯ ತೀರ್ಮಾನಕ್ಕೆ ಬರುತ್ತದೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಅಂಶ *1*ನ್ನು ನಕಾರಾತ್ಮಕ ಎಂದು ನಿರ್ಣಯಿಸಲಾಗಿದೆ.

*18.* **ಅಂಶ *2*:-** ಈಗಾಗಲೇ ಅಂಶ-*1* ನ್ನು ನಕಾರಾತ್ಮಕ ಎಂದು ನಿರ್ಣಯಿಸಿದ್ದು ಈ ಕೆಳಕಂಡಂತೆ ಆದೇಶಿಸಲಾಗಿದೆ:-

## ಆದೇಶ

ಎದುರುದಾರರು ಹೆಣ್ಣುಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ರಕ್ಷಿಸುವ ನಿಯಮ *2006*ರ ಕಲಂ *5(2)* ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:*1*ನ್ನು ತಿರಸ್ಕರಿಸಲಾಗಿದೆ.

ಪ್ರಕರಣವನ್ನು ದಿ:*24-02-2018* ಕ್ಕೆ ಮುಂದೂಡಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ: *9*ನೇ ಫೆಬ್ರವರಿ *2018* ರಂದು ನಾನು ಉದ್ಘೋಷಿಸಿದ್ದೇನೆ.)

***(ರಘುರಾಮ ಎನ್.ಎಸ್.)***
***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,***
***ತರೀಕೆರೆ.***